

## ಇರುವೆಗೊಂದು ಕಾಲ...

'ಕಚ್ಚುತ್ತೆ ಜೋಪಾನ' ಎನ್ನುವುದು 'ಕೆಂಪಿರ್ವೆ' ಚಿತ್ರಶೀರ್ಷಿಕೆಯ ಅಡಿಟಿಪ್ಪಣಿ. ಸಾಮಾನ್ಯ ಪ್ರಜೆಯೊಳಗೆ ಅಡಗಿರುವ ಹೋರಾಟದ ಶಕ್ತಿಯನ್ನು ಈ ಸಿನಿಮಾದ ಮೂಲಕ ಹೇಳಲು ಹೊರಟಿದ್ದಾರೆ ನಿರ್ದೇಶಕ ವೆಂಕಟ್ ಭಾರದ್ವಾಜ್.

ಹಿರಿಯ ನಟ ಎಚ್.ಜಿ. ದತ್ತಾತ್ರೇಯ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ದತ್ತಣ್ಣ ಚಿತ್ರದ ನಾಯಕ ಎಂದಮೇಲೆ, ಆ ಚಿತ್ರದಲ್ಲಿ ಕಥೆಯೇ ಹೀರೋ ಎಂದಾಯಿತಲ್ಲ. ನಿವೇಶನ ಕೊಳ್ಳಲು ಹೋಗಿ ಮೋಸಹೋದವರು ಹೋರಾಟ ರೂಪಿಸುವ ಕಥೆ ಚಿತ್ರದಲ್ಲಿದೆಯಂತೆ. ಇರುವೆ ಕೂಡ ಆನೆಯನ್ನು ಮಣಿಸಬಲ್ಲದು ಎನ್ನುವ ನಂಬಿಕೆಯ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಈ ಸಿನಿಮಾ ಭ್ರಷ್ಟ ವ್ಯವಸ್ಥೆಯ ವಿರುದ್ಧ ಮಧ್ಯಮವರ್ಗದ ಬಂಡಾಯದ ಕಥೆ ಒಳಗೊಂಡಿದೆ. ಈ ಬಂಡಾಯದ ತವಕತಲ್ಲಣಗಳ ಅಭಿವ್ಯಕ್ತಿಯಾಗಿ ದತ್ತಣ್ಣ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಕೆಂಪಿರ್ವೆ' ಚಿತ್ರದ ನಿರ್ದೇಶಕ ವೆಂಕಟ್ ಭಾರದ್ವಾಜ್ ಹಿರಿಯ ನಿರ್ದೇಶಕ ಸಿ.ವಿ. ಶಿವಶಂಕರ್ ಅವರ ಪುತ್ರ. ತಮ್ಮ ಸಹೋದರ ವೆಂಕಟ್ ಭಾರದ್ವಾಜ್ ಕಥೆಯನ್ನು ಅವರು ಚಿತ್ರರೂಪಕ್ಕೆ ತಂದಿದ್ದಾರೆ. ಲಕ್ಷ್ಮಣ್ ಚಿತ್ರದ ತಾರಾಬಳಗದಲ್ಲೂ ಇದ್ದಾರೆ. ಸಯ್ಯಾಜಿ ಶಿಂಧೆ, ರೂಪಾ ಹೆಗಡೆ ಹಾಗೂ ಸುವಿಲ್ ರಾಸನ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕಿಶನ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ಕನ್ನಡಮಾಸ ನವೆಂಬರ್‌ನಲ್ಲೇ ಚಿತ್ರ ತೆರೆ ಕಾಣಲಿದೆ.



## ಸಂಯುಕ್ತಾ! ಮತ್ತೆ ಢವಢವ...

ಮೂರು ದಶಕಗಳ ಹಿಂದೆ ತೆರೆಕಂಡ 'ಸಂಯುಕ್ತಾ' ಶಿವರಾಜ್ಕುಮಾರ್ ನಟನೆಯ ಯಶಸ್ವೀ ಚಿತ್ರಗಳಲ್ಲೊಂದು. ಕಥೆಯಲ್ಲಿನ ರೋಚಕತೆಯ ಮೂಲಕ ಈ ಸಿನಿಮಾ ಚಿತ್ರರಸಿಕರ ಗಮನಸೆಳೆದಿತ್ತು. ಈಗ ಅದೇ ಹೆಸರಿನ ಮತ್ತೊಂದು ಸಿನಿಮಾ ತೆರೆಕಾಣುವ ತವಕದಲ್ಲಿದೆ. ಹಳೆಯ 'ಸಂಯುಕ್ತಾ'ದಂತೆಯೇ ಹೊಸ 'ಸಂಯುಕ್ತಾ 2' ಕೂಡ ಸಸ್ಪೆನ್ಸ್ ಥ್ರಿಲ್ಲರ್ ಒಳಗೊಂಡಿರುವ ಸಿನಿಮಾ.

ವೈದ್ಯಕೀಯ ಶಿಕ್ಷಣದ ಕಾಲೇಜೊಂದರಲ್ಲಿ ನಡೆಯುವ ಕಥೆಯನ್ನು ಒಳಗೊಂಡ 'ಸಂಯುಕ್ತಾ 2' ಸೈನ್ಸ್ ಫಿಕ್ಷನ್ ಹಾಗೂ ಥ್ರಿಲ್ಲರ್ ಕಥೆ ಒಳಗೊಂಡಿದೆಯಂತೆ. ಮೂವರು ಸ್ನೇಹಿತರ ಸುತ್ತ ಹೆಣೆದುಕೊಂಡ ಚಿತ್ರಕಥೆಯನ್ನು ಅಭಿರಾಮ್ ನಿರ್ದೇಶಿಸಿದ್ದಾರೆ. 'ಸಂಯುಕ್ತಾ' ಮೂಲಕ ನಿರ್ದೇಶಕನಾಗುವ ಅವರ ಐದು ವರ್ಷಗಳ ಕನಸು ನನಸಾಗಿದೆಯಂತೆ. ಗ್ರಾಫಿಕ್ಸ್ ಕುಸುರಿಯನ್ನೊಳಗೊಂಡ ದೃಶ್ಯಗಳು ನೋಡುಗರನ್ನು ಭಯಗೊಳಿಸುವಷ್ಟು ಪರಿಣಾಮಕಾರಿಯಾಗಿವೆ ಎಂದು ಚಿತ್ರತಂಡ ಹೇಳಿಕೊಳ್ಳುತ್ತಿದೆ.

ಚೇತನ್ಚಂದ್ರ ಚಿತ್ರದ ಪ್ರಮುಖಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಪಾತ್ರಕ್ಕಾಗಿ ಅವರು ತಮ್ಮ ತೂಕ ಹೆಚ್ಚಿಸಿಕೊಳ್ಳುವುದರ ಜೊತೆಗೆ, ದೇಹವನ್ನು ಸಾಕಷ್ಟು ಹುರಿಗೊಳಿಸಿದ್ದಾರೆ. ನೇಹಾ ಪಾಟೀಲ ಹಾಗೂ ಐಶ್ವರ್ಯ ಸಿಂಧೋಗಿ ಚಿತ್ರದ ನಾಯಕಿಯರು. ಪ್ರಭು ಸೂರ್ಯ ಹಾಗೂ ಸಂಜಯ್ ಮತ್ತೆರಡು ಮುಖ್ಯ ಪಾತ್ರಗಳನ್ನು ಪೋಷಿಸಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಕೆ.ವಿ. ರವಿಚಂದ್ರರ ಸಂಗೀತ ಚಿತ್ರಕ್ಕಿದೆ.

■ ರಘು